## ನಿಮ್ಮೊಡನೆ

ಕ್ಯಾಲೆಂಡರ್ ಬದಲಾದ ತಕ್ಷಣ ಎಲ್ಲವೂ ಬದಲಾಗುವುದಿಲ್ಲ ಎನ್ನುವುದು ನಿಜ. ಆದರೂ ಹೊಸ ವರ್ಷದ ಆರಂಭದಲ್ಲಿ ಹೊಸ ನಿರೀಕ್ಷೆಗಳಿರುತ್ತವೆ. ಅದಕ್ಕೆ ತಕ್ಕಂತೆ ಸಾರ್ವಜನಿಕ ಜೀವನವನ್ನು ಭ್ರಷ್ಟಾಚಾರ ಮುಕ್ತಗೊಳಿಸುವ ನಿಟ್ಟಿನಲ್ಲಿ ಜನರು ಹೆಚ್ಚು ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳುವ ಅಗತ್ಯ ಈಗ ಹಿಂದೆಂದಿಗಿಂತ ಹೆಚ್ಚಿದೆ.




# ಹೊಸತನದ ನಿರೀಕ್ಷೆಯಲ್ಲಿ..

ಕಳೆದು ಹೋದ ವರ್ಷದತ್ತ ಹಿಂತಿರುಗಿ ನೋಡಿದರೆ 'ಮುಂದಿನ ವರ್ಷವೂ ಹೀಗೇನಾ?' ಎಂದು ಆತಂಕವಾಗುತ್ತದೆ. 2011ರಲ್ಲಿ ಸಾರ್ವಜನಿಕ ಬದುಕು ಅಷ್ಟೊಂದು ಹದಗೆಟ್ಟಿತ್ತು ಎನ್ನದೆ ನಿರ್ವಾಹವಿಲ್ಲ. ಒಂದೇ ಸಮನೆ ಏರಿದ ಬೆಲೆಗಳು, ಆರ್ಥಿಕತೆಯ ಹಿಂಜರಿತ, ಹಣದುಬ್ಬರದ ದುಷ್ಪರಿಣಾಮ, ರಾಜಕೀಯ ತಲ್ಲಣಗಳು, ಸಾರ್ವಜನಿಕ ಜೀವನದಲ್ಲಿ ಕಣ್ಮರೆಯಾದ ಪ್ರಾಮಾಣಿಕತೆ, ಬಯಲಾಗುತ್ತಾ ಹೋದ ಭ್ರಷ್ಟಾಚಾರದ ಕರಾಳ ಮುಖಗಳು– ಎಲ್ಲವೂ ಸೇರಿ 2011 'ದುಃಸ್ವಪ್ನ'ದಂತೆ ಕಾಣುತ್ತದೆ. ಭಾರತದ ಮಟ್ಟಿಗೆ ಹೇಗೋ, ಹಾಗೆಯೇ ಕರ್ನಾಟಕದ ಮಟ್ಟಿಗೂ ಇದು ನಿಜ. ದೆಹಲಿಯಲ್ಲಿ ಹಗರಣಗಳು ಬಯಲಾಗಿ 'ದೊಡ್ಡ ಮನುಷ್ಯರು' ಎಂದುಕೊಂಡ ಹಲವರು ಜೈಲು ಪಾಲಾದರೆ, ಕರ್ನಾಟಕದಲ್ಲಿ ಪ್ರತಿದಿನ ಒಬ್ಬರಲ್ಲ ಒಬ್ಬ ಗಣ್ಯರು ಜೈಲು, ಕೋರ್ಟು ಎಂದು ಅಲೆದಾಡುತ್ತಾ, ಸಮೂಹ ಮಾಧ್ಯಮಗಳಲ್ಲಿ 'ಅದು ಬಿಟ್ಟರೆ ಬೇರೆ ಸುದ್ದಿಯಿಲ್ಲ' ಎಂಬಂತಾಯಿತು. 'ಸಾರ್ವಜನಿಕ ಹಣ ಮತ್ತು ಸರ್ಕಾರಿ ಭೂಮಿ ಎರಡೂ ಇರುವುದು ದೋಚುವುದಕ್ಕೇ' ಎಂಬಂತಹ ವಾತಾವರಣ ನಿರ್ಮಾಣವಾಯಿತು. ಸಾರ್ವಜನಿಕ ಜೀವನದಲ್ಲಿ ನೈತಿಕತೆ ಎನ್ನುವ ಶಬ್ದವೇ ಅಸ್ಪೃಶ್ಯ ಎನ್ನುವಂತಾಯಿತು. ಈ ಹಿಂದೆ ಹೀಗಿರಲಿಲ್ಲ ಎಂದಲ್ಲ. ಆದರೆ ಕರ್ನಾಟಕದಲ್ಲಿ ಇಷ್ಟೊಂದು ವ್ಯಾಪಕ ಪ್ರಮಾಣದಲ್ಲಿ, ಲಜ್ಜೆಯ ಸುಳಿವೇ ಇಲ್ಲದಂತೆ ಅಕ್ರಮಗಳು, ಹಗರಣಗಳು ನಡೆದಿರುವುದು ಇದೇ ಮೊದಲು.

ಚುನಾವಣೆಯಲ್ಲಿ ಸಭ್ಯ, ಪ್ರಾಮಾಣಿಕ, ಜನಪರ ಕಾಳಜಿಯ ವ್ಯಕ್ತಿಗಳನ್ನು ಆರಿಸಬೇಕಾದ ಮತದಾರರೇ ಹಣ, ಸ್ವಜಾತಿ ಮತ್ತು ಇತರ ಆಮಿಷಗಳಿಗೆ ಸುಲಭವಾಗಿ ಬಲಿಯಾಗುತ್ತಾರೆ ಎನ್ನುವುದನ್ನು ಸಂಶಯವೇ ಇಲ್ಲದಂತೆ ಸಾಬೀತು ಪಡಿಸಿದ ವರ್ಷವಿದು. ಇಡೀ ರಾಜ್ಯದ ಎಲ್ಲ ಜಾತಿ, ವರ್ಗಗಳ ಜನರನ್ನು ಪ್ರತಿನಿಧಿಸಬೇಕಾದ ಶಾಸಕರು ತಮ್ಮ ತಮ್ಮ ಜಾತಿಗೆ ಸೀಮಿತವಾಗಿ ಕುಬ್ಜರಾಗುತ್ತಾ ನಡೆಯುವುದನ್ನು ಮತದಾರರು ಆನಂದತುಂದಿಲರಾಗಿ ನೋಡುತ್ತಿರುವುದು ಪರಿಸ್ಥಿತಿಯ ವ್ಯಂಗ್ಯವೇ ಸರಿ.

ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕರ ಸಾತ್ವಿಕ ಸಿಟ್ಟು ಪ್ರಬಲವಾಗಿ ದಾಖಲಾದರೆ ಮಾತ್ರ ಇಂತಹ ವಿದ್ಯಮಾನಗಳನ್ನು ನಿಯಂತ್ರಿಸಬಹುದು. 2011ರಲ್ಲಿ ಸ್ವಲ್ಪ ಮಟ್ಟಿಗೆ ಇಂತಹ ಸಾತ್ವಿಕ ಸಿಟ್ಟಿನ ಪ್ರದರ್ಶನವೂ ನಡೆಯಿತು. ಅಣ್ಣಾ ಹಜಾರೆ ಮತ್ತು ನ್ಯಾ.ಸಂತೋಷ ಹೆಗ್ಡೆ ಇಂತಹ ಸಾತ್ವಿಕ ಪ್ರತಿಭಟನೆಯ ಮುಂಚೂಣಿಯಲ್ಲಿ ನಿಂತರು. ತಕ್ಕಮಟ್ಟಿಗೆ ಯುವಜನರೂ ಈ ಹೋರಾಟಕ್ಕೆ ಬೆಂಬಲ ನೀಡಿದರು. ಆದರೆ ಈ ಜನಪರ ಹೋರಾಟಗಳಲ್ಲೂ ರಾಜಕೀಯ ಲೆಕ್ಕಾಚಾರ ಶುರುವಾದದ್ದು ಪರಿಸ್ಥಿತಿ ಇನ್ನಷ್ಟು ದಿಕ್ಕೆಡಲು ಕಾರಣವಾಗಿದೆ. ಭ್ರಷ್ಟಾಚಾರವನ್ನು ಮಟ್ಟ ಹಾಕಲು ಎಲ್ಲರೂ ಒಟ್ಟು ಸೇರಿ ತರಬೇಕಾಗಿದ್ದ ಬಲಿಷ್ಠ ಲೋಕಪಾಲ ಮಸೂದೆ, ವರ್ಷದ ಕೊನೆಗೆ ಯಾವ ದಿಕ್ಕನ್ನು ಹಿಡಿಯಿತು ಎನ್ನುವುದನ್ನು ಗಮನಿಸಿದರೆ ಪರಿಸ್ಥಿತಿಯ ಗಂಭೀರತೆ ಗೊತ್ತಾಗುತ್ತದೆ.

ಹೊಸ ವರ್ಷದಲ್ಲಾದರೂ ಇಂತಹ ಪ್ರವೃತ್ತಿಗೆ ಕಡಿವಾಣ ಹಾಕಬೇಕಾದ ಅಗತ್ಯವಿದೆ. ಕ್ಯಾಲೆಂಡರ್ ಬದಲಾದ ತಕ್ಷಣ ಎಲ್ಲವೂ ಬದಲಾಗುವುದಿಲ್ಲ ಎನ್ನುವುದು ನಿಜ. ಆದರೂ ಹೊಸ ವರ್ಷದ ಆರಂಭದಲ್ಲಿ ಹೊಸ ನಿರೀಕ್ಷೆಗಳಿರುತ್ತವೆ. ಅದಕ್ಕೆ ತಕ್ಕಂತೆ ಸಾರ್ವಜನಿಕ ಜೀವನವನ್ನು ಭ್ರಷ್ಟಾಚಾರ ಮುಕ್ತಗೊಳಿಸುವ ನಿಟ್ಟಿನಲ್ಲಿ ಜನರು ಹೆಚ್ಚು ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳುವ ಅಗತ್ಯವಿದೆ. ಜನರು ಸ್ವತಃ ಪ್ರಾಮಾಣಿಕರಾಗಿದ್ದು, ಸಮೂಹವನ್ನೂ ಎಚ್ಚರಿಸುವ ಕೆಲಸ ಮಾಡಿದರೆ ಮಾತ್ರ ಸ್ವಚ್ಛ ಪ್ರಜಾಪ್ರಭುತ್ವ ಸಾಧ್ಯವಾಗುತ್ತದೆ. ಅಭಿವೃದ್ಧಿಯ ಕಲ್ಪನೆಯನ್ನು ಪಕ್ಷ ರಾಜಕೀಯದ ಸಂಕುಚಿತ ಪರಿಧಿಯಿಂದ ಮೇಲೆತ್ತಿ, ಹಣಕಾಸಿನ ಮೇಲ್ವಿಚಾರಣೆಗೆ ನಿಷ್ಠುರ ಕ್ರಮಗಳನ್ನು ಕೈಗೊಂಡರೆ, ಆರ್ಥಿಕತೆಯೂ ಚೇತರಿಕೆ ಕಾಣುತ್ತದೆ. ಉದ್ಯೋಗಸೃಷ್ಟಿಯೂ ಹೆಚ್ಚುತ್ತದೆ.

ಹಳ್ಳಿಗಳಿಂದ ನಗರಕ್ಕೆ ಏರುತ್ತಿರುವ ವಲಸೆ ಕರ್ನಾಟಕದಲ್ಲಿ ಅನೇಕ ಸಮಸ್ಯೆಗಳನ್ನು ಸೃಷ್ಟಿಸುತ್ತಿದೆ. ನಷ್ಟದಾಯಕ ಕೃಷಿಯಲ್ಲಿ ತೊಡಗಿಸಿಕೊಂಡ ರೈತನಂತೆಯೇ, ನಗರ ಜೀವನದ ಸಂಕೀರ್ಣತೆಯಿಂದ ಬೇಸತ್ತ ಯುವಜನರೂ ಆತ್ಮಹತ್ಯೆ ಮಾಡಿಕೊಳ್ಳುವ ಪ್ರವೃತ್ತಿ 2011ರಲ್ಲಿ ಹೆಚ್ಚಾಗಿ ಕಂಡುಬಂದಿದೆ. ಬೆಂಗಳೂರಂತೂ 'ಆತ್ಮಹತ್ಯೆಯ ರಾಜಧಾನಿ' ಎನ್ನಿಸಿಕೊಂಡಿದೆ. ಯುವಜನರಲ್ಲಿ ಹೆಚ್ಚುತ್ತಿರುವ ಖಿನ್ನತೆ, ಮಾನಸಿಕ ಗೊಂದಲಗಳಿಗೆ, ಏರುತ್ತಿರುವ ಜೀವನವೆಚ್ಚ ಮತ್ತು ಬಿಡುವೇ ಇಲ್ಲದ ಭಾರೀ ಸಂಬಳದ ದುಡಿಮೆ– ಎರಡೂ ಏಕಕಾಲಕ್ಕೆ ಕಾರಣ ಆಗುತ್ತಿರುವುದು ಸಮಾಜ ವಿಜ್ಞಾನಿಗಳು ಅಧ್ಯಯನ ನಡೆಸಬೇಕಾದ ಅಂಶ. 'ದೊಡ್ಡ ಸಂಬಳದ ಕೆಲಸವಿದ್ದವರೂ ಸುಖವಾಗಿಲ್ಲ; ಕಡಿಮೆ ಸಂಬಳದ ಕೆಲಸಗಾರರೂ ನೆಮ್ಮದಿಯಿಂದ ಇಲ್ಲ' ಎನ್ನುವುದು ಏನನ್ನು ಸೂಚಿಸುತ್ತದೆ?

■ ಬಿ.ಎಂ.ಹನೀಫ್